**PW-3**

(ಇಂದು ದಿನಾಂಕಃ 05-07-2025 ರಂದು ಗಂಟೆಗೆ ಸತ್ಯಪ್ರತಿಜ್ಞೆಯ ಮೇರೆಗೆ ಪ್ರಮಾಣವಚನ ಬೋಧಿಸಲಾಯಿತು.)

**ಪಾಟೀ ಸವಾಲು -ಪ್ರತಿವಾದಿ ಪರ ಶ್ರೀ ಎಂ.ಎನ್.ಎಸ್ ವಕೀಲರಿಂದಃ**

ನನ್ನ ತಂದೆ, ವಾದಿಯವರ ತಂದೆ ಹಾಗೂ ಗಜಾನನ ನಾರಾಯಣ ಶೇಟ್ ರವರು ಖಾಸಾ ಸಹೋದರರು ಎಂದರೆ ಸರಿ. ನನ್ನ ತಂದೆಯವರು ಹಿರಿಯವರು ಆಗಿರುತ್ತಾರೆ. ನನ್ನ ಕುಟುಂಬದ ಆಸ್ತಿ ಸರ್ವೇ ನಂಬರ್.638 ಹಿಸ್ಸಾ.2, ಸರ್ವೇ ನಂಬರ್.638 ಹಿಸ್ಸಾ.3 ಮತ್ತು ಸರ್ವೇ ನಂಬರ್.636 ಹಿಸ್ಸಾ.4 ಆಗಿರುತ್ತದೆ. ನನ್ನ ತಂದೆ, ವಾದಿಯವರ ತಂದೆ ಹಾಗೂ ಗಜಾನನ ನಾರಾಯಣ ಶೇಟ್ ರವರ ನಡುವೆ 1998ನೇ ಇಸವಿಯಲ್ಲಿ ವಾಂಟಣಿ ದಸ್ತಾವೇಜು ಆಗಿರುತ್ತದೆ ಎಂದರೆ ಸರಿ. ಸದರಿ ವಾಂಟಣಿ ದಸ್ತಾವೇಜಿನಲ್ಲಿ ಮೇಲೆ ತಿಳಿಸಿದ ಎಲ್ಲಾ ಸರ್ವೇ ನಂಬರಗಳು ವಾಂಟಣಿಯಾಗಿದ್ದು ಇರುತ್ತದೆ. 1998ನೇ ಇಸವಿಯಲ್ಲಿ ನನ್ನ ತಂದೆ, ವಾದಿಯವರ ತಂದೆ ಹಾಗೂ ಗಜಾನನ ನಾರಾಯಣ ಶೇಟ್ ರವರ ನಡುವೆ ವಾಂಟಣಿಯಾದ ಜಾಗವು ಪೋಡಿಯಾಗಿದ್ದು ಇರುತ್ತದೆ. ಗಜಾನನ ನಾರಾಯಣ ಶೇಟ್ ಹಾಗೂ ವಾದಿಯವರ ಹಕ್ಕಿನ ಜಾಗದ ನಡುವೆ 1998ನೇ ಇಸವಿಯಲ್ಲಿ ಸ್ವಲ್ಪ ಪಗಾರ ಇದ್ದು, ನಂತರ 2000ನೇ ಇಸವಿಯಲ್ಲಿ ಪೂರ್ಣ ಪಗಾರ ಹಾಕಿದ್ದು ಇರುತ್ತದೆ. 2000ನೇ ಇಸವಿಯಲ್ಲಿ ನಾನು ದಾಂಡೇಲಿಯಲ್ಲಿ ಕಾಲೇಜು ವಿದ್ಯಾಭ್ಯಾಸ ಮಾಡುತ್ತಿದ್ದೆ. 1998ನೇ ಇಸವಿಯಲ್ಲಿ ವಾಂಟಣಿಯಾದ ಸ್ಥಳದ ಪೋಡಿ ನಕಾಶೆಯನ್ನು ನೋಡಿರುತ್ತೇನೆ. 1998ನೇ ಇಸವಿಯಲ್ಲಿ ನನ್ನ ತಂದೆ ಹಾಗೂ ಅವರ ಸಹೋದರರ ನಡುವೆ ವಾಂಟಣಿಯಾದ ನಂತರ ಯಾವುದೇ ಪೋಡಿಯಾಗಿದ್ದು ಇರುವುದಿಲ್ಲ ಬದಲಾಗಿ 2003ನೇ ಇಸವಿಯಲ್ಲಿ ಪೋಡಿಯಾಗಿದ್ದು ಇರುತ್ತದೆ ಎಂದರೆ ಸರಿಯಲ್ಲ.

ಸರ್ವೇ ನಂಬರ್.638 ಹಿಸ್ಸಾ.2 ರಲ್ಲಿ ಒಟ್ಟು 25 ಕ್ಷೇತ್ರ ಇತ್ತು ಎಂದರೆ ಸರಿ. ಸದರಿ 25 ಕ್ಷೇತ್ರದ ಪೈಕಿ 1998ರಲ್ಲಿ ಆದ ವಾಂಟಣಿ ಪ್ರಕಾರ 9 ಗುಂಟೆ ಕ್ಷೇತ್ರ ನನ್ನ ಚಿಕ್ಕಪ್ಪನಾದ ಗಜಾನನ ನಾರಾಯಣ ಶೇಟ್ ರವರಿಗೆ, 8 ಗುಂಟೆ ಕ್ಷೇತ್ರ ವಾದಿಯವರ ತಂದೆಯವರಿಗೆ ಹಾಗೂ ಉಳಿದ 8 ಗುಂಟೆ ಕ್ಷೇತ್ರ ನನ್ನ ತಂದೆಯವರ ಪಾಲಿಗೆ ಬಂದಿದ್ದು ಇರುತ್ತದೆ. ಸರ್ವೇ ನಂಬರ್.636 ಹಿಸ್ಸಾ.3 ಪ್ರತಿವಾದಿಯವರ ಹಕ್ಕಿನ ಸ್ಥಳ ಎಂದರೆ ಗೊತ್ತಿಲ್ಲ. ಪ್ರತಿವಾದಿಯವರು ಸರ್ವೇ ನಂಬರ್.636 ಹಿಸ್ಸಾ.3ರಲ್ಲಿ ವಾಸ್ತವ್ಯದ ಮನೆ ಹಾಗೂ ತೋಟವನ್ನು ಮಾಡಿಕೊಂಡು ವಾಸ್ತವ್ಯ ಇರುತ್ತಾರೆ ಎಂದರೆ

ಸಾಕ್ಷಿಯು ವಾಸ್ತವ್ಯ ಇರುತ್ತಾರೆ ಆದರೆ ವಾಸ್ತವ್ಯ ಇರುವ ಸರ್ವೇ ನಂಬರ್ ನನಗೆ ಗೊತ್ತಿಲ್ಲ. ಪ್ರತಿವಾದಿಯವರ ಜಾಗದ ಲಗ್ತು ಗಜಾನನ ನಾರಾಯಣ ಶೇಟ್ ರವರ ಹಕ್ಕಿನ ಜಾಗ ಇರುತ್ತದೆ ಎಂದರೆ ಸರಿ. 1998ನೇ ಇಸವಿಯಲ್ಲಿ ನಮ್ಮ ತಂದೆಯವರ ಕುಟುಂಬದ ನಡುವೆ ವಾಂಟಣಿಯಾಗುವ ಪೂರ್ವದಲ್ಲಿ ಸರ್ವೇ ನಂಬರ್.638/ಅ ಹಿಸ್ಸಾ.2 ರಿಂದ ಸರ್ವೇ ನಂಬರ್.636 ಹಿಸ್ಸಾ.4ಕ್ಕೆ ಹೋಗುವ ದಾರಿ ಇತ್ತು ಎಂದರೆ ಸಾಕ್ಷಿಯು ಸದರಿ ದಾರಿಯಲ್ಲಿ ನಾವು ಹಾಗೂ ನಮ್ಮ ಕುಟುಂಬದವರು ಮಾತ್ರ ಹೋಗುತ್ತಿರುವುದಾಗಿ ನುಡಿದಿರುತ್ತಾರೆ. 1998ರಲ್ಲಿ ವಾಂಟಣಿಯಾಗುವ ಕಾಲಕ್ಕೆ ಸರ್ವೇ ನಂಬರ್.638/ಅ ಹಿಸ್ಸಾ.2 ಮತ್ತು ಸರ್ವೇ ನಂಬರ್.636 ಹಿಸ್ಸಾ.4ರ ನಡುವೆ ಸ್ವಲ್ಪ ಎತ್ತರದಲ್ಲಿ ಪಗಾರ ಇತ್ತು. ಪ್ರತಿವಾದಿಯವರ ವಾಸ್ತವ್ಯ ಸ್ಥಳ ಎತ್ತರದಲ್ಲಿ ಇರುತ್ತದೆ ಎಂದರೆ ಸರಿ. ಸರ್ವೇ ನಂಬರ್.638/ಅ ಹಿಸ್ಸಾ.2 ಮತ್ತು ಸರ್ವೇ ನಂಬರ್.636 ಹಿಸ್ಸಾ.4 ತಗ್ಗು ಪ್ರದೇಶದಲ್ಲಿ ಇದೆ ಎಂದರೆ ಸರಿ. ಮಳೆಗಾಲದಲ್ಲಿ ಸರ್ವೇ ನಂಬರ್.638/ಅ ಹಿಸ್ಸಾ.2 ಮತ್ತು ಸರ್ವೇ ನಂಬರ್.636 ಹಿಸ್ಸಾ.4ರಲ್ಲಿ ನೀರು ತುಂಬುತ್ತದೆ ಎಂದರೆ ಸರಿ. ಪ್ರತಿವಾದಿಯವರು ನಮ್ಮ ಹಕ್ಕಿನ ಸರ್ವೇ ನಂಬರ್.638/ಅ ಹಿಸ್ಸಾ.2 ರಲ್ಲಿರುವ ಕಾಲುದಾರಿಯ ಮೂಲಕ ಅವರ ಮನೆಗೆ ಹೋಗುತ್ತಿದ್ದರು ಎಂದರೆ ಸರಿಯಲ್ಲ. ಮಳೆಗಾಲದಲ್ಲಿ ನಮ್ಮ ಹಕ್ಕಿನ ಸ್ಥಳದಲ್ಲಿ ನೀರು ತುಂಬಿ ಪ್ರತಿವಾದಿಯವರಿಗೆ ಹೋಗಲು ಅನಾನೂಕೂಲ ವಾಗಿರುವುದರಿಂದ ಪ್ರತಿವಾದಿಯವರ ತಂದೆಯವರು ನನ್ನ ಚಿಕ್ಕಪ್ಪನಾದ ಗಜಾನನ ನಾರಾಯಣ ಶೇಟ್ ರವರಿಂದ ಒಂದು ಗುಂಟೆ 8 ಆಣೆ ಜಾಗವನ್ನು ಖರೀದಿ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಖರೀದಿ ಮಾಡಿರಬಹುದು ಆದರೆ ದಾರಿಯ ಸಲುವಾಗಿ ಅಲ್ಲ ಎಂದು ನುಡಿದಿರುತ್ತಾರೆ. ಪ್ರತಿವಾದಿಯವರ ತಂದೆಯವರ ಒಂದು ಗುಂಟೆ 8 ಆಣೆ ಸ್ಥಳವನ್ನು ಗಜಾನನ ನಾರಾಯಣ ಶೇಟ್ ರವರ ಹಕ್ಕಿನ ಸರ್ವೇ ನಂಬರ್.638/ಅ ಹಿಸ್ಸಾ.2ಅ ರಲ್ಲಿ ಖರೀದಿ ಮಾಡಿರುತ್ತಾರೆ ಎಂದರೆ ಸರಿ. ಪ್ರತಿವಾದಿಯವರ ತಂದೆಯವರು ಖರೀದಿ ಮಾಡಿದ ಜಾಗಕ್ಕೆ ಸರ್ವೇ ನಂಬರ್.638/ಅ ಹಿಸ್ಸಾ.7 ಆಗಿರುತ್ತದೆ ಎಂದರೆ ಗೊತ್ತಿಲ್ಲ. ಗಜಾನನ ನಾರಾಯಣ ಶೇಟ್ ಅವರ ಹಕ್ಕಿನ ಸರ್ವೇ ನಂಬರ್.638/ಅ ಹಿಸ್ಸಾ.2ಅರಲ್ಲಿ 5 ಗುಂಟೆ ಜಾಗವನ್ನು ಗೋವಿಂದ ಚಿದಂಬರ್ ಮೇಸ್ತರವರಿಗೆ ಹಾಗೂ 2 ಗುಂಟೆ ಜಾಗವನ್ನು ಅರುಣ ಗೋವಿಂದ ಮೇಸ್ತರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಮಾರಾಟ ಮಾಡಿರುತ್ತಾರೆ, ಆದರೆ ಎಷ್ಟು ಕ್ಷೇತ್ರವನ್ನು ಮಾರಾಟ ಮಾಡಿರುತ್ತಾರೆ ಎನ್ನುವುದು ಗೊತ್ತಿಲ್ಲ ಎಂದು

ನುಡಿದಿರುತ್ತಾರೆ. ಸಾಕ್ಷಿಗೆ ನಿಡಿ-4ನ್ನು ತೋರಿಸಲಾಗಿ ಸದರಿ ಗೇಟಿನ ಎಡಭಾಗದಲ್ಲಿರುವ ಪಗಾರದ ಒಳಭಾಗದಲ್ಲಿ ತೆಂಗಿನ ಮರ ಕಾಣುವ ಸ್ಥಳವು ಪ್ರತಿವಾದಿ ಹಾಗೂ ಮೇಸ್ತರವರ ಜಾಗ ಆಗಿರುತ್ತದೆ. ನಿಡಿ-4ನ್ನು ಸಾಕ್ಷಿಗೆ ತೋರಿಸಲಾಗಿ ಸದರಿ ಪೋಟೋದಲ್ಲಿ ಕಾಣುವ ಗೇಟಿನ ಮುಂದಿನ ಭಾಗ(ಒಳಗಿರುವ ಮಣ್ಣು ತುಂಬಿದ ಜಾಗ) ಪ್ರತಿವಾದಿಯವರ ತಂದೆಯವರು ಖರೀದಿ ಮಾಡಿದ ಜಾಗ ಎಂದರೆ ಸರಿಯಲ್ಲ. ನಿಡಿ-4ರಲ್ಲಿ ಕಾಣುವ ಗೇಟು ಪ್ರತಿವಾದಿಯವರು ನಿರ್ಮಿಸಿದ್ದು ಇರುವುದಿಲ್ಲ ಬದಲಾಗಿ ವಾದಿಯವರ ಗೇಟು ಆಗಿರುತ್ತದೆ. ನಿಡಿ-4ರಲ್ಲಿ ಗೇಟಿನ ಮೂಲಕ ಸ್ವಲ್ಪ ಮುಂದೆ ಹೋಗಿ ಎಡಕ್ಕೆ ತಿರುಗಿದರೆ ಪ್ರತಿವಾದಿಯವರ ವಾಸ್ತವ್ಯದ ಮನೆ ಇರುತ್ತದೆ ಎಂದರೆ ಸರಿ. ಪ್ರತಿವಾದಿಯವರ ನಿಡಿ-4ರಲ್ಲಿ ಕಾಣುವ ದಾರಿಯ ಮೂಲಕ ಅವರ ವಾಸ್ತವ್ಯದ ಮನೆಗೆ ಹೋಗಿ ಬರುತ್ತಾರೆ ಎಂದರೆ ಸಾಕ್ಷಿಯು ಈ ದಾವೆ ಸಲ್ಲಿಸಿದ 2016ನೇ ಇಸವಿಯಿಂದ ಹೋಗಿ ಬಂದು ಮಾಡುವುದಾಗಿ ನುಡಿದಿರುತ್ತಾರೆ. ಸಾಕ್ಷಿಗೆ ನಿಡಿ-3ನ್ನು ತೋರಿಸಲಾಗಿ ರಾಷ್ಟ್ರೀಯ ಹೆದ್ದಾರಿಯಿಂದ ಪಂಚಾಯತಿ ರಸ್ತೆ ಸರ್ವೇ ನಂಬರ್.638/ಅ ಹಿಸ್ಸಾ.2ಅ ರಲ್ಲಿ ಹೋಗಿರುತ್ತಾರೆ ಎಂದರೆ ಸರಿ. ಪ್ರತಿವಾದಿಯವರು ಖರೀದಿ ಮಾಡಿದ ಒಂದು ಗುಂಟೆ 8 ಆಣೆ ಜಾಗವು 2013ರ ಪೂರ್ವದಲ್ಲಿ ತಗ್ಗು ಪ್ರದೇಶದಲ್ಲಿ ಇತ್ತು ಎಂದರೆ ಸರಿ. ಪ್ರತಿವಾದಿಯವರ ತಂದೆಯವರು ಖರೀದಿಸಿದ ಸ್ಥಳಕ್ಕೆ ಮಣ್ಣು ಹಾಕಿ ಕಲ್ಲನ್ನು ಕುರಿಸಿ ನಿಡಿ-4ರಲ್ಲಿ ಕಾಣುವ ಗೇಟನ್ನು ಹಾಕಿರುತ್ತಾರೆ ಎಂದರೆ ಸರಿಯಲ್ಲ. ನಿಡಿ-4ರಲ್ಲಿ ಕಾಣುವ ಗೇಟಿನ ಎಡಭಾಗದಲ್ಲಿರುವ ಜಾಗವು ವಾದಿಯವರ ಹಕ್ಕಿನ ಸ್ಥಳ ಎಂದರೆ ಸಾಕ್ಷಿಯು ಗೇಟಿನ ಬಲಭಾಗದಲ್ಲಿರುವ ಸಿಮೆಂಟ್ ಪಗಾರದ ಬಲಭಾಗದಿಂದ ಇರುವ ಜಾಗವು ವಾದಿಯ ಹಕ್ಕಿನ ಸ್ಥಳ ಎಂದು ನುಡಿದಿರುತ್ತಾರೆ. ನಿಡಿ-4ರಲ್ಲಿ ಕಾಣುವ ಗೇಟಿನ ಎಡಭಾಗದಲ್ಲಿರುವ ಸಿಮೆಂಟ್ ಪಗಾರವನ್ನು ಅರುಣ ಗೋವಿಂದ ಮೇಸ್ತರವರು ಜಾಗ ಖರೀದಿ ಮಾಡಿದ ಜಾಗ ಎಂದರೆ ಸರಿಯಲ್ಲ. ನಿಡಿ-4ರಲ್ಲಿ ಕಾಣುವ ಸಿಮೆಂಟ್ ಪಗಾರವನ್ನು ವಾದಿಯವರು ನಿರ್ಮಿಸಿದ್ದು ಇರುವುದಿಲ್ಲ ಎಂದರೆ ಸರಿಯಲ್ಲ. ಜೂನ್ 2017ರಲ್ಲಿ ದಾವಾ ಸ್ಥಳವನ್ನು ಮೊಜಣಿ ಮಾಡಿದ್ದು ಇರುತ್ತದೆ. ಮೊಜಣಿ ಮಾಡುವ ಕಾಲಕೆಕ ಭೂಮಾಪಕರು ನೋಟಿಸು ನೀಡಿದ್ದು ಇರುತ್ತದೆ. ಮೊಜಣಿ ಕಾಲಕ್ಕೆ ನಾನು, ವಾದಿಯರು ಹಾಗೂ ಪ್ರತಿವಾದಿಯವರು ಸ್ಥಳದಲ್ಲಿ ಹಾಜರು ಇದ್ದರು. ಮಾಜಣಿ ಮಾಡಿದ ನಂತರ ಸ್ಥಳದಲ್ಲಿ ಗಡಿ ಗುರುತು ಮಾಡಿ ಕಲ್ಲು ಹಾಕಿ ಸ್ಥಳದಲ್ಲಿ ನಕಾಶೆ ಮಾಡಿದ್ದು ಇರುತ್ತದೆ. ಸದರಿ ನಕಾಶೆಯನ್ನು ನಾನು ನೋಡಿರುತ್ತೇನೆ. ನಿಪಿ-10 ನಕಾಶೆಯನ್ನು ಮೊಜಣಿ ದಿನ ಸ್ಥಳದಲ್ಲಿ

ತಯಾರಿಸಿದ್ದು ಇರುತ್ತದೆ. ಭೂಮಾಪಕರು ನಿಪಿ-10 ನಕಾಶೆಯನ್ನು ಸ್ಥಳದಲ್ಲಿ ತಯಾರಿಸಿದ್ದು ಇರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯವರು ಮೊಜಣಿಗೆ ಸ್ಥಳದಲ್ಲಿ ಪ್ರಕರಣವನ್ನು ಸಲ್ಲಿಸಿರುತ್ತಾರೆ ಎಂದರೆ ಸಾಕ್ಷಿಯು ಚೈನ್ ನಿಂದ ಮೊಜಣಿ ಮಾಡಿರುವ ಬಗ್ಗೆ ಪ್ರತಿವಾದಿಯವರು ತಕರಾರು ಸಲ್ಲಿಸಿದ್ದು ನಂತರದಲ್ಲಿ ಭೂಮಾಪಕರು ಟೇಬಲ್ ಸರ್ವೆಯನ್ನು ಮಾಡಿರುತ್ತಾರೆ. ಭೂಮಾಪಕರು ಯಾವುದೇ ಮೊಜಣಿಯನ್ನು ಮಾಡಿದ್ದು ಇರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯವರು ವಾದಿ ಹಕ್ಕಿನ ಸ್ಥಳವನ್ನು ಅತಿಕ್ರಮಿಸಿದ್ದು ಇರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ಹಕ್ಕಿನ ಸ್ಥಳವಾದ ಸರ್ವೆ ನಂಬರ್.636 ಹಿಸ್ಸಾ.4ಅ, 4ಬ, 4ಕ ವನ್ನು ಮೊಜಣಿ ಮಾಡಿಬೇಕೆಂದು ಭೂಮಾಪಕರಿಗೆ ಅರ್ಜಿ ಸಲ್ಲಿಸಿದ್ದು ಇರುತ್ತದೆ ಎಂದರೆ ಸರಿ. ದಿನಾಂಕಃ19-01-2018ರಂದು ರಮೇಶ ಎನ್ ಎಂ. ಭೂಮಾಪಕರು ಮೊಜಣಿ ಮಾಡುವುದಕ್ಕೆ ಸ್ಥಳಕ್ಕೆ ಬಂದಿರುತ್ತಾರೆ ಎಂದರೆ ಸರಿ. ಸರ್ವೆ ನಂಬರ್.636 ಹಿಸ್ಸಾ.4ರ ಮೂಲ ಹಿಸ್ಸಾ ನಕ್ಷೆಗೂ ಹಾಗೂ ಪೋಡಿ ಹಿಸ್ಸಾ ನಕ್ಷೆಗೂ ವ್ಯತ್ಯಾಸ ಇರುವುದರಿಂದ ಮೊಜಣಿ ಮಾಡದೇ ಸದರಿ ಅರ್ಜಿಯನ್ನು ವಿಲೆ ಮಾಡುವಂತೆ ನಿಪಿ-9ರಂತೆ ಪತ್ರವನ್ನು ನೀಡಿರುತ್ತೇವೆ ಎಂದರೆ ಸರಿ. ದಾವಾ ಸ್ಥಳದ ಮೊಜಣಿ ಕಾಲಕ್ಕೆ ಸರ್ವೆ ನಂಬರ್.638/ಅ ಹಿಸ್ಸಾ.2 ರ ಮೂಲ ನಕ್ಷೆಗೆ ಹಾಗೂ ಪೋಡಿ ನಕ್ಷೆಗೂ ವ್ಯತ್ಯಾಸ ಇರುವುದರಿಂದ ಅಳತೆ ಮಾಡಲು ಪ್ರತಿವಾದಿಯವರು ಭೂಮಾಪಕರಿಗೆ ತಕರಾರು ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ಭೂಮಾಪಕರು ಪ್ರತಿವಾದಿಯವರ ದಾವಾ ಸ್ಥಳವನ್ನು ಅತಿಕ್ರಮಣ ಮಾಡಿದ್ದಾರೆ ಎಂದು ಸುಳ್ಳು ನಕ್ಷೆ ತಯಾರಿಸಿದ್ದಾರೆ ಎಂದರೆ ಸರಿಯಲ್ಲ. ವಾದಿಯವರು ನನ್ನ ದೊಡ್ಡಪ್ಪ ಮಕ್ಕಳಾಗಿರುವುದರಿಂದ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಬರೆದಿರುವ ಸುಳ್ಳು ಪ್ರಮಾಣ ಪತ್ರಕ್ಕೆ ಅನುಕೂಲವಾಗುವಂತೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಸಹಿ ಇದೆ.

ಪ್ರ.ದ.ನ್ಯಾ.ದಂ. ಕುಮಟಾ